ಪ್ರೀತಿಸುವ ವಿಷಯವನ್ನು ಹೇಳಿದ್ದೇನಾ...? ಇಲ್ಲ. ಅವಳ ತಪ್ಪೇನೂ ಇಲ್ಲ. ಆದರೆ ನಾನು..? ಹೇಮಾಳನ್ನು ಬಿಟ್ಟು ಬೇರೊಬ್ಬ ಹೆಣ್ಣನ್ನು ಕನಸುಮನಸಿನಲ್ಲಿಯೂ ಕಲ್ಪಿಸಿಕೊಳ್ಳಲಾರೆ. ಅವಳನ್ನು ಬಿಟ್ಟು ಬದುಕಲಾರೆ.. ಇಲ್ಲ.. ಏನಾದರೂ ಮಾಡಿ ಅವಳ ಮದುವೆಯನ್ನು ತಡೆಯಬೇಕು...

'ಇಲ್ಲಮ್ಮಾ.. ಅವಳನ್ನು ಬಿಟ್ಟು ಬೇರೆ ಹೆಣ್ಣನ್ನು ಮದುವೆಯಾಗಲಾರೆ.. ಕೈಮುಗಿದು ಕೇಳಿಕೊಳ್ಳುತ್ತೇನೆ.. ಏನಾದರೂ ಮಾಡಮ್ಮಾ..' ನಾನು ಅತ್ಯಂತ ದೈನ್ಯತೆಯಿಂದ ಬಿಕ್ಕಿ ಬಿಕ್ಕಿ ಅಳುತ್ತಲೇ ಅಮ್ಮನನ್ನು ಬೇಡಿಕೊಂಡೆ.

'ಅಯ್ಯೋ ಕಂದಾ.. ನೀನೇನೋ ಅವಳನ್ನು ಪ್ರೀತಿಸಿದೆ.. ಅವಳು ನಿನ್ನನ್ನು ಪ್ರೀತಿಸಿದ್ದಾಳಾ...? ಹಾಗಿದ್ದರೆ ಈ ಮದುವೆಗೆ ಅವಳು ಹೇಗೆ ಒಪ್ಪಿಗೆ ಕೊಟ್ಟಳು...? ಅವಳು ನಿನ್ನನ್ನು ಪ್ರೀತಿಸುತಿದ್ದೇನೆ ಎಂದು ಒಂದು ಮಾತು ನಿನಗೆ ಹೇಳಿದ್ದರೆ ಹೇಳಿಬಿಡು.. ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ... ಹೇಳಪ್ಪಾ.. ಹೇಳೋ ಕಂದಾ..' ಅಮ್ಮನೂ ಕಣ್ಣೀರು ಹಾಕತೊಡಗಿದಳು. ಅಮ್ಮನ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರಗಳಿರಲಿಲ್ಲ. ನಾನು ಮೌನಿಯಾದೆ. ಅಮ್ಮನಿಗೆ ಇವನದು ಏಕಮುಖ ಪ್ರೀತಿಯೆಂದು ಅರ್ಥವಾಗಿರಬೇಕು.

'ನೀನು ಅವಳನ್ನು ಪ್ರೀತಿಸಿದೆಯೆಂಬ ಕಾರಣಕ್ಕಾಗಿ ನಿಶ್ಚಯವಾಗಿರುವ ಮದುವೆಯನ್ನು ನಿಲ್ಲಿಸಲು ಸಾಧ್ಯವೇ..? ಜನ ಏನೆಂದಾರು..? ಅಷ್ಟಕ್ಕೂ ಮದುವೆಗೆ ಒಪ್ಪಿರುವ ಹೇಮಾಳದ್ದಾಗಲೀ, ಅವರ ಅಪ್ಪ ಅಮ್ಮನದ್ದಾಗಲೀ ಇದರಲ್ಲಿ ಯಾವ ತಪ್ಪಿದೆ..? ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ತರಲು ನಮಗೇನು ಹಕ್ಕಿದೆ..? ಬೇಡಾ ಮಗನೇ.. ಅಂತಹ ಪ್ರಯತ್ನವನ್ನು ಮಾಡಿ ಅಪವಾದಕ್ಕೆ ಗುರಿಯಾಗುವುದು ಬೇಡ.. ಕಾಲ ಎಲ್ಲವನ್ನೂ ಮರೆಸುತ್ತದೆ.. ಸಮಾಧಾನ ಮಾಡಿಕೋ ಕಂದಾ..' ಅಮ್ಮ ನನ್ನ ತಲೆಯನ್ನು ಬಾಚಿ ತಬ್ಬಿ ಮುಖವನ್ನು ಅವಳೆದೆಗೆ ಒರಗಿಸಿಕೊಂಡು ಸಾಂತ್ವನ ಹೇಳಿದಳು.

* * *

## ಮುಗಿದ ಪ್ರೇಮಪರ್ವ

ನನ್ನ ಪ್ರೇಮಪರ್ವ ಮುಗಿದ ಮೇಲೆ ಭಗ್ನಪ್ರೇಮಪರ್ವ ಪ್ರಾರಂಭವಾಯಿತು. ಈ ಪರ್ವದಲ್ಲಿ ನನಗೆ ಹೇಮಾಳಿಲ್ಲದ ಬದುಕು ನಿರರ್ಥಕವಾಗಿ ಕಾಣಿಸ ತೊಡಗಿತು. ಕಳೆದುಹೋದ ಪ್ರೇಮ ಮರಳಿ ಸಿಗಲಾರದು ಎಂಬ ವಾಸ್ತವವನ್ನು ಅರಿಯಲು ನಾನು ವಿಫಲನಾದೆ. ಇನ್ನು ನನ್ನ ಬದುಕಿನಲ್ಲಿ ಎಲ್ಲವೂ ಮುಗಿಯಿತು ಎಂಬ ಭ್ರಮೆ ನನ್ನ ಮನಸ್ಸನ್ನು ಆವರಿಸಿ ನಾನು ಸಮಯ ಕಳೆಯಲು ದುಶ್ಚಟಗಳ ದಾಸನಾಗಿ ಹೋದೆ. ಹಣ, ಆರೋಗ್ಯ, ಮಾನಸಿಕ ಸ್ಥಿಮಿತ ಎಲ್ಲವನ್ನೂ ಕಳೆದುಕೊಂಡು ನಾನು ನೋಡುವವರ ಕಣ್ಣಿನಲ್ಲಿ ನಗೆಪಾಟಲಿಗೆ ಗುರಿಯಾಗಿ ಹೋದೆ. ಇದರಿಂದ ನನಗೇನೂ ಅನಿಸುತ್ತಿರಲಿಲ್ಲ ವಾದರೂ ಅವಳ ಬದುಕಿನ ಭವಿಷ್ಯವೇ ಆಗಿದ್ದ ನನ್ನ ಸ್ಥಿತಿಯನ್ನು ಕಂಡು ತೀವ್ರವಾಗಿ ಯಾತನೆಪಟ್ಟವಳೆಂದರೆ ನನ್ನ ಅಮ್ಮ ಮಾತ್ರ.

ಆ ವಾರವೆಲ್ಲಾ ಅಮ್ಮ ನನ್ನನ್ನು ಬಿಟ್ಟು ಎಲ್ಲೂ ಹೋಗಲಿಲ್ಲ ಮತ್ತು ನಾನು ಮೈಸೂರಿಗೆ ಹೋಗಲೂ ಬಿಡಲಿಲ್ಲ. ನನಗೆ ಕುಳಿತಲ್ಲಿ ನಿಂತಲ್ಲಿ ಹೇಮಾಳ ನೆನಪಾಗತೊಡಗಿ ಮನೆಯಲ್ಲಿ ಸಮಯ ಕಳೆಯುವುದು ದುಸ್ತರವಾಯಿತು. ಪರೀಕ್ಷೆಗಳು ಹತ್ತಿರ ಬರುತ್ತಿವೆ ನಾನು ಹೋಗಬೇಕು ಎಂದು ಪಟ್ಟುಹಿಡಿದು ಮೈಸೂರಿಗೆ ಹೊರಟೆ. ಅಮ್ಮನ ಮನಸ್ಸಿನಲ್ಲಿ ಯಾವುದೋ ಹೆದರಿಕೆಯಿದ್ದಿರ ಬೇಕು. ಜೋಪಾನ ಮಗನೇ ಜೋಪಾನ.. ಎಂದು ನೂರು ಸಾರಿ ಹೇಳಿ ಅಮ್ಮ ನನ್ನನ್ನು ಕಳುಹಿಸಿಕೊಟ್ಟಳು.

ಮೈಸೂರಿಗೆ ಬಂದ ಮೇಲೆ ನಾನು ತೀವ್ರ ಖಿನ್ನತೆಯಿಂದ ಬಳಲತೊಡಗಿದೆ. ಎಲ್ಲಿ ಕುಳಿತರೂ ನಿಂತರೂ ಹೇಮಾಳ ಬಿಂಬವೇ ಮನಸ್ಸಿನಲ್ಲಿ ಮೂಡಿ ಬರುತ್ತಿತ್ತು. ತರಗತಿಯಲ್ಲಿ ಕುಳಿತು ಪಾಠ ಕೇಳುತಿದ್ದರೂ ಮನಸ್ಸು ಏನೇನೋ ಯೋಚಿಸುತ್ತಾ ಎಲ್ಲೆಲ್ಲೋ ಅಲೆಯುತಿತ್ತು. ನನ್ನ ಈ ಸ್ಥಿತಿಯನ್ನು ಬಲು ಬೇಗ ಗುರುತಿಸಿದವನೆಂದರೆ ನನ್ನ ಸಹಪಾಠಿ ಅಪ್ಪಾಜಿ ಗೌಡ. ಆತ ಮಂಡ್ಯದವನು. ಬಹಳ ವಾಚಾಳಿ. ಪ್ರಥಮ ವರ್ಷದ ಸ್ನಾತಕೋತ್ತರ ಪದವಿಯಲ್ಲಿಯೇ ನನಗೆ ಹತ್ತಿರದ ಸ್ನೇಹಿತನಾದ. ನಾನು ಹೆಚ್ಚು ಮಾತನಾಡದೇ ಮೌನವಾಗಿಯೇ ಇರುತ್ತಿದ್ದುದು ಅವನಿಗೆ ಹಾಸ್ಯದ ಸಂಗತಿಯಾಗಿರುತ್ತಿತ್ತು. ಲೋ ಮೌನಿ ಎಂದೇ ನನ್ನನ್ನು ಮಾತನಾಡಿಸುತ್ತಿದ್ದ. ಅಂದು ತರಗತಿಗಳು ಮುಗಿದ ಮೇಲೆ ನಾನು ನನ್ನ ಪಾಡಿಗೆ ಹೊರಗೆ ಹೊರಟಾಗ ಬೈಕಿನಲ್ಲಿ ಹಿಂದೆ ಬಂದವನು 'ಲೋ ಮೌನಿ ನಿಂತ್ಕಳೋ ಬಡ್ಡೆತ್ತದೆ..' ಎಂದು ಜೋರಾಗಿ ಕೂಗಿದ. ನಾನು ನಿಂತೆ.

ಬಂಗಾರದ
ಬೆಲೆ ಏರಿದಾಗ,
ಅವಳ
ಬೇಡಿಕೆಯೂ ಏರಿತು!

★ ಬಾಲು ಪಟಗಾರ



ಏನೋ ನಿನ್ನ ಅವತಾರ.. ಮೊದಲೇ ಮೌನಿ.. ಈಗ ಮೂಗನಾಗಿ ಬಿಟ್ಟಿದೀಯಲ್ಲೋ.. ಏನೋ ಸಮಾಚಾರ.. ಎಂದು ಮುಗುಳ್ನಗುತ್ತಲೇ ಕೇಳಿದ. ನನಗೆ ಏನು ಹೇಳಬೇಕೆಂದು ತಿಳಿಯದೇ ನಿರುತ್ತರನಾದೆ. ಏನೋ ಬಡ್ಡೆತ್ತದೆ.. ಯಾವುದಾದ್ರೂ ಹುಡ್ಗಿ ಕೈ ಕೊಟ್ಲೇನೋ.. ಎಂದು ಜೋರಾಗಿ ನಕ್ಕ. ಅವನು ಸರಿಯಾಗಿಯೇ ಊಹಿಸಿದ್ದ. ನನಗೂ ಯಾರಲ್ಲಾದರೂ ಹೇಳಿಕೊಂಡು ನನ್ನ ಹೃದಯದ ಭಾರವನ್ನು ಇಳಿಸಿಕೊಳ್ಳಬೇಕಿತ್ತು. ಬರೀ ಹೂಂಗುಟ್ಟಿ ಕಣ್ಣುಗಳಲ್ಲಿ ನೀರು ತುಂಬಿಕೊಂಡೆ. ಅವನಿಗೆ ನನ್ನನ್ನು ಕಂಡು ಒಂದು ಕ್ಷಣ ಕನಿಕರವಾಗಿರ ಬೇಕು. ನನ್ನನ್ನೇ ನೋಡಿದವನು ಈ ವಯಸ್ಸಿನಲ್ಲಿ ಎಲ್ಲಾರಿಗೂ ಇರೋದು ಅದೊಂದೇ ರೋಗ.. ಆದ್ರೂ ಒಳ್ಳೇ ಪಿಚ್ಚರ್ ಹೀರೋ ತರಾ ಇರೋ ನಿಂಗೇ ಕೈಕೊಟ್ಟೋಳು ಯಾರಪ್ಪಾ ಅವಳು ರಂಭೆ... ಎಂದ. ನಾನು ಮಾತನಾಡದೇ ತಲೆತಗ್ಗಿಸಿದೆ. ಹತ್ತಲೇ ಬಡ್ಡೆತ್ತದೆ ಬೈಕು.. ಎಂದು ಗಂಭೀರವಾಗಿ ನುಡಿದು ನಾನು ಬೈಕು ಹತ್ತಿ ಕುಳಿತ ಮೇಲೆ ಜೋರಾಗಿ ಬೈಕು ಚಲಾಯಿಸಿಕೊಂಡು ಹೊರಟ.

ನಾವು ಹುಣಸೂರು ರಸ್ತೆಯಲ್ಲಿದ್ದ ಒಂದು ಸಣ್ಣ ಬಾರ್ ಅಂಡ್ ರೆಸ್ಟೋರೆಂಟಿಗೆ ಬಂದು ಕುಳಿತೆವು. ನಾನು ಈ ಹಿಂದೆ ನಮ್ಮ ಸಹಪಾಠಿಗಳ ಜೊತೆಯಲ್ಲಿ ಹಲವಾರು ಬರ್ತ ಡೇ, ಎಂಗೇಜ್ಮೆಂಟು, ಮದುವೆ ಪಾರ್ಟಿಗಳಿಗೆ ಹೋಗಿದ್ದರೂ ಏನನ್ನೂ ಹೆಚ್ಚು ಮಾತನಾಡದೇ, ಕುಡಿಯದೇ ಸುಮ್ಮನೆ ಅವರ ಜೊತೆ ಸಮಯ ಕಳೆದು ಊಟ ಮಾಡಿ ಬರುತ್ತಿದ್ದೆ. ಅಂದು ಅಪ್ಪಾಜಿ ಅವನಿಗೆ ಬಿಯರ್ ಆರ್ಡರ್ ಮಾಡಿ ಸಿಗರೇಟು ಹತ್ತಿಸಿ ಏನಾಯ್ತೋ ಮೌನಿ.. ಅಂದ. ನನಗೆ ಹೇಗೆ ಪ್ರಾರಂಭಿಸುವುದು, ಏನು ಹೇಳುವುದು ತಿಳಿಯದೇ ದೃಷ್ಟಿಯನ್ನು ಕಿಟಕಿಯ ಆಚೆ ಹರಿಸಿ ಕುಳಿತೆ. ಅವನೂ ಸಾವಕಾಶವಾಗಿ ಹೇಳಲಿ ಎಂದು ಬಲವಂತ ಮಾಡಲಿಲ್ಲ. ವೈಟರ್ ಬಂದು ಬಿಯರ್ ತಂದಿಟ್ಟು ಹೋದ ಮೇಲೆ ಅವನು ಮಗ್ಗಿಗೆ ಹಾಕಿಕೊಂಡು ಕುಡಿಯತೊಡಗಿದ. ಇನ್ನೂ ಒಂದು ಮಗ್ ಖಾಲಿಯಿತ್ತು. ನಾನೂ ಅದಕ್ಕೆ ಬಿಯರ್ ಸುರಿದುಕೊಂಡು ಒಂದು ಸಿಪ್ ಕುಡಿದೆ. ಒಂಥರಾ ಕಹಿ ಎನಿಸಿತು. ಅಪ್ಪಾಜಿಗೆ ನನ್ನ ಸ್ಥಿತಿ ನೋಡಿ ಅರ್ಥವಾಗಿತ್ತು. ಅವನು ಆಶ್ಚರ್ಯ ಪಡಲಿಲ್ಲ. ಒಂದು ಮಗ್ ಬಿಯರ್ ಕುಡಿದ ಮೇಲೆ ಮನಸ್ಸಿನಲ್ಲಿ ಏನೋ ಒಂದು ಸ್ಥಿತಿ. ನಾನು ಮಾತು ಶುರು ಮಾಡಿದೆ. ನಡೆದಿದ್ದನ್ನು ಅಪ್ಪಾಜಿಗೆ ತಿಳಿಸಿದೆ. ಅವನು ಕುಡಿದ ಮತ್ತಿನಲ್ಲಿ ಜೋರಾಗಿ ನಗತೊಡಗಿದ. 'ಅಯ್ಯೋ ಬಡ್ಡೆತ್ತದೆ.. ರೈಲು ಹೋದ ಮೇಲೆ ಟಿಕೇಟು ತಗಂಡಿದಿಯಲ್ಲೋ..' ಎಂದು ಮತ್ತೆ ಜೋರಾಗಿ ನಕ್ಕ.

'ಅವಳದ್ದೇನೂ ತಪ್ಪಿಲ್ಲ ಬಿಡು ಇದರಲ್ಲಿ..' ಎಂದ. ನಾವು ಹೀಗೆ ಮಾತನಾಡಿಕೊಂಡು ರಾತ್ರಿ ಹತ್ತರವರೆಗೆ ಬಾರಿನಲ್ಲಿ ಕುಳಿತಿದ್ದೆವು. ಮೊದಲ ಬಾರಿಗೆ ನಾನು ಒಂದು ಪೂರ್ತಿ ಬಿಯರ್ ಕುಡಿದಿದ್ದೆ. ತಲೆ ತಿರುಗುತಿತ್ತು. ಅವನು ನನ್ನನ್ನು ನನ್ನ ರೂಮಿನ ಬಳಿ ಇಳಿಸಿರಬೇಕು. ನಾನು ರೂಮಿಗೆ ಹೇಗೆ ಬಂದೆ, ಹೇಗೆ ಮಲಗಿದೆ ಎಂದು ತಿಳಿಯಲಿಲ್ಲ. ಬೆಳಿಗ್ಗೆ ಎದ್ದಾಗ ಹತ್ತು ಗಂಟೆಯಾಗಿತ್ತು.

(ಸಶೇಷ)